ಆಸ್ಪತ್ರೆಯ ಕಾಂಪೌಂಡಿನಲ್ಲಿರುವ ಮರದ ಕೆಳಗೆ ಕಿರುಪಂಚೆಯನ್ನು ಸುತ್ತಿ ಅಪ್ಪ ನಿಂತಿರುವುದನ್ನು ಪ್ರೇಮಚಂದ್ರ ಕಂಡ. ಓಡಿ ಹತ್ತಿರ ಹೋದಾಗ ಅಪ್ಪನ ತುಟಿಯಲ್ಲಿ ಬೀಡಿ ಹೊಗೆಯಾಡುತ್ತಿತ್ತು. ಅಪ್ಪ ನಕ್ಕರು.

"ಛೆ... ಈ ಬೀಡಿ ಸ್ವಲ್ಪ ಕೂಡ ಚೆನ್ನಾಗಿಲ್ಲ... ಬೀಡಿ ಅಂದ್ರೆ ನನ್ನ ಪ್ರಕಾಶಾನೇ" ಅಪ್ಪ ಮತ್ತೊಂದು ದಮ್ಮೆಳೆದು ಬೀಡಿಯನ್ನು ದೂರಕ್ಕೆಸೆದರು.

"ನಾವು ಬೇಗನೆ ಊರಿಗೆ ಹೋಗೋಣ. ನಾನು ಅಲ್ಲಿರದಿದ್ದರೆ ಎಲ್ಲವೂ ಬುಡ ಮೇಲಾಗುತ್ತದೆ. ಕೊಯ್ಲಿಗೆ ಬಂದವರು ಹರಟೆ ಹೊಡೆಯುತ್ತಾ ಕೂತಿರ್ತಾರೆ" ಅಪ್ಪ ಗೇಟಿನತ್ತ ನಡೆದರು. ಅಷ್ಟರಲ್ಲಿ ಅಲ್ಲಿಗೆ ಓಡಿ ಬಂದ ಆಸ್ಪತ್ರೆಯ ಸಿಬ್ಬಂದಿ ಅಪ್ಪನನ್ನು ಸ್ಟ್ರೆಚರಿನಲ್ಲಿ ಮಲಗಿಸಿ ಆಸ್ಪತ್ರೆಯೊಳಕ್ಕೆ ಕೊಂಡೊಯ್ದರು.

ಪ್ರೇಮಚಂದ್ರ ನಿಟ್ಟುಸಿರು ಬಿಟ್ಟ.

ತಣ್ಣನೆಯ ಗಾಳಿ ಬೀಸಿತು. ಅಪ್ಪ ಬಿಸಾಡಿದ ಬೀಡಿ ನೆಲದಲ್ಲಿ ಬಿದ್ದು ಹೊಗೆಯಾಡುತ್ತಿತ್ತು. ಪ್ರೇಮಚಂದ್ರ ಬಾಗಿ ಅದನ್ನೆತ್ತಿಕೊಂಡ. ಅವನು ಜೀವನದಲ್ಲೇ ಬೀಡಿ ಸೇದಿರಲಿಲ್ಲ. ಪಾರ್ಟಿಗಳಲ್ಲಿ ಬಲವಂತ ಮಾಡಿದರೂ ಮದ್ಯಪಾನ ಮಾಡಿರಲಿಲ್ಲ. ಅವನು ಅಪ್ಪ ಬಿಸಾಡಿದ ಬೀಡಿಯನ್ನು ಸೂಕ್ಷ್ಮವಾಗಿ ನೋಡಿದ. ವಯಲೆಟ್ ಬಣ್ಣದ ದಾರ ಎಲೆ, ಹೊಗೆಸೊಪ್ಪೆಲ್ಲಾ ಸೇರಿ ಅದೊಂದು ಅಪೂರ್ವ ವಸ್ತುವಿನಂತೆ ತೋರಿತು. ಜೀವದ ಕಿಡಿ ಅದರಲ್ಲಿದೆಯೆಂದು ಭಾಸವಾಯಿತು. ಪ್ರೇಮಚಂದ್ರ ಸುತ್ತಲೂ ಕಣ್ಣಾಡಿಸಿದ. ಯಾರೂ ನೋಡುತ್ತಿಲ್ಲವೆಂದು ಖಚಿತಪಡಿಸಿಕೊಂಡ. ಅಪ್ಪ ಸೇದಿ ಎಸೆದ ಬೀಡಿಯನ್ನು ಅವನು ತುಟಿಯ ಮಧ್ಯೆ ಇಟ್ಟು ಎಳೆದ. ಸುದೀರ್ಘವಾದೊಂದು ಹೊಗೆ ಆತನ ಆತ್ಮವನ್ನು ಪ್ರವೇಶಿಸಿತು. ಅನಂತರ ಸುರುಳಿ ಸುರುಳಿಯಾಗಿ ಹೊರಬಂದು ನಿಧಾನವಾಗಿ ಸುತ್ತಲೂ ತುಂಬಿಕೊಂಡಿತು. ನಲ್ವತ್ತೈದು ವರ್ಷ ವಯಸ್ಸಾದರೂ ಸಿಗದ ಆನಂದ ಬೀಡಿಯ ಹೊಗೆಯ ಲಹರಿಯಲ್ಲಿ ಸಿಗುತ್ತಿದೆಯೆಂದು ಅವನು ತನ್ನಷ್ಟಕ್ಕೆ ಹೇಳಿಕೊಂಡ.

"ಬೀಡಿಗಳನ್ನು ತುಂಬಾ ನಿರ್ಲಕ್ಷ್ಯದಿಂದ ದೂರಕ್ಕೆಸೆಯ ಬಾರದು" ಎನ್ನುತ್ತಾ ಅವನು ಮತ್ತೊಂದು ದಮ್ಮು ಎಳೆಯಲು ಸಜ್ಜಾದ.


### ಸಂತೋಷ್ ಏಚ್ಚಿಕ್ಕಾನಂ

ಕಾಸರಗೋಡು ಜಿಲ್ಲೆಯ ಬೇಡಡ್ಕದವರು. ಈ ತನಕ 15 ಕಥಾಸಂಕಲನಗಳು ಪ್ರಕಟವಾಗಿವೆ. ಕಿರುತೆರೆ ಹಿರಿತೆರೆಗಳಲ್ಲೂ ಸಕ್ರಿಯ. ಸಂತೋಷ್ ಅವರ ಅನೇಕ ಕತೆಗಳು ಕನ್ನಡ, ತಮಿಳು, ತೆಲುಗು, ಒಡಿಯಾ, ಬಂಗಾಲಿ, ಇಂಗ್ಲಿಷ್, ಫ್ರೆಂಚ್ ಭಾಷೆಗಳಿಗೆ ಅನುವಾದಗೊಂಡಿವೆ. 'ಬಿರಿಯಾನಿ' ಎಂಬ ಕಥಾಸಂಕಲನ ಕನ್ನಡದಲ್ಲಿ ಪ್ರಕಟವಾಗಲಿದೆ. ಪ್ರಸ್ತುತ ಕೇರಳದ ಎರ್ನಾಕುಲಂನಲ್ಲಿ ನೆಲೆಸಿದ್ದಾರೆ.

### ಕೆ.ಕೆ. ಗಂಗಾಧರನ್

ಹುಟ್ಟಿದ್ದು ಕೇರಳದ ಕಾಸರಗೋಡಿನ ಒಂದು ಹಳ್ಳಿಯಲ್ಲಿ. ಬೆಳೆದಿದ್ದು ಕೊಡಗಿನ ಸೋಮವಾರಪೇಟೆಯ ಕಬ್ಬಿಣಸೇತುವೆ ಎಂಬಲ್ಲಿ. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಗಂಗಾಧರನ್ ಅವರ ಮಾತೃಭಾಷೆ ಮಲಯಾಳಂ. ಸುಮಾರು 350 ಕತೆಗಳು, ಐದು ಕಾದಂಬರಿಗಳನ್ನು ಅವರು ಅನುಮಾದಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.